**All India Radio: Bangalore**
**National Bulletin In Kannada**
**19.06.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<><*<><>*><>

ಮುಖ್ಯಾಂಶಗಳು

೧.ಕೃಷಿ, ಮಾಹಿತಿ ತಂತ್ರಜ್ಞಾನ, ಸೈಬರ್ ಭದ್ರತೆ, ರಕ್ಷಣಾ ಕ್ಷೇತ್ರದಲ್ಲಿ ಪರಸ್ಪರ ಸಹಕಾರಕ್ಕೆ ಭಾರತ, ಕ್ರೊಯೇಷಿಯಾ ಒಪ್ಪಿಗೆ

೨.ಇರಾನ್‌ನಿಂದ ಭಾರತೀಯ ಪ್ರಜೆಗಳನ್ನು ಸ್ಥಳಾಂತರಿಸಲು ಆಪರೇಷನ್ ಸಿಂಧು ಪ್ರಾರಂಭಿಸಿದ ಭಾರತ

೩.ದಕ್ಷಿಣ ಗಾಜಾದಲ್ಲಿ ಇಸ್ರೇಲ್ ಸೇನೆಯ ದಾಳಿಗೆ ೫೧ ಜನರು ಸಾವು

೪.ಹಾಕಿ ಇಂಡಿಯಾ ಮಾಸ್ಟರ್ಸ್ ಕಪ್: ಮಹಿಳಾ ವಿಭಾಗದಲ್ಲಿ ಕೇರಳ ವಿರುದ್ಧ ಕರ್ನಾಟಕ ತಂಡಕ್ಕೆ ಭರ್ಜರಿ ಗೆಲುವು

><><><><><><><><><

ಪ್ರಧಾನಿ ನರೇಂದ್ರ ಮೋದಿ ಅವರು ಕ್ರೊಯೇಷಿಯಾಕ್ಕೆ ತಮ್ಮ ಐತಿಹಾಸಿಕ ಮತ್ತು ಮೊದಲ ಅಧಿಕೃತ ಭೇಟಿಯನ್ನು ಸಂಪನ್ನಗೊಳಿಸಿದ್ದು, ನವದೆಹಲಿಗೆ ತೆರಳುತ್ತಿದ್ದಾರೆ. ಉನ್ನತ ಮಟ್ಟದ ಮಾತುಕತೆಗಳಿಂದ ತುಂಬಿದ್ದ ಈ ಭೇಟಿಯು, ಭಾರತ-ಕ್ರೊಯೇಷಿಯಾ ಸಂಬಂಧಗಳಲ್ಲಿ ಗಮನಾರ್ಹ ಉನ್ನತಿಯನ್ನು ಗುರುತಿಸಿತು ಮತ್ತು ಭವಿಷ್ಯದ ಕಾರ್ಯತಂತ್ರದ ಸಹಯೋಗಗಳಿಗೆ ವೇದಿಕೆಯನ್ನು ಸಿದ್ಧಪಡಿಸಿತು. ಇದಕ್ಕೂ ಮುನ್ನ ಪ್ರಧಾನಿ ಮೋದಿ ಮತ್ತು ಕ್ರೊಯೇಷಿಯಾದ ಪ್ರಧಾನಿ ಆಂಡ್ರೆಜ್ ಪ್ಲೆಂಕೋವಿಕ್, ಜಾಗ್ರೆಬ್‌ನಲ್ಲಿ ನಿಯೋಗ ಮಟ್ಟದ ಮಾತುಕತೆ ನಡೆಸಿದರು. ಯುರೋಪ್ ಅಥವಾ ಏಷ್ಯಾದಲ್ಲಿರಲಿ, ಯುದ್ಧಭೂಮಿಯಲ್ಲಿ ಪರಿಹಾರಗಳನ್ನು ಕಂಡುಹಿಡಿಯಲಾಗುವುದಿಲ್ಲ. ಸಂವಾದ ಮತ್ತು ರಾಜತಾಂತ್ರಿಕತೆಯು ಮುಂದಿನ ಏಕೈಕ ಕಾರ್ಯಸಾಧ್ಯವಾದ ಮಾರ್ಗಗಳಾಗಿವೆ.

ಎಲ್ಲಾ ರಾಷ್ಟ್ರಗಳ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸುವ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು. ಭಯೋತ್ಪಾದನೆ ಮಾನವೀಯತೆಯ ಶತ್ರು ಮತ್ತು ವಿಶ್ವಾದ್ಯಂತ ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ಬೆದರಿಕೆ ಎಂದು ಪ್ರಧಾನಿ ಮೋದಿ ಪುನರುಚ್ಚರಿಸಿದರು. ಪಹಲ್ಗಾಮ್ ಭಯೋತ್ಪಾದಕ ದಾಳಿಯಂತಹ ಕಠಿಣ ಸಮಯದಲ್ಲಿ ಭಾರತವನ್ನು ಬೆಂಬಲಿಸಿದ್ದಕ್ಕಾಗಿ ಕ್ರೊಯೇಷಿಯಾದ ಪ್ರಧಾನಿ ಮತ್ತು ಅಲ್ಲಿನ ಜನರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಧ್ವನಿ: ಪ್ರಧಾನಮಂತ್ರಿ ನರೇಂದ್ರಮೊದಿ(೩೦ ಸೆಕೆಂಡ್‌ಗಳು)

ದ್ವಿಪಕ್ಷೀಯ ವ್ಯಾಪಾರವನ್ನು ವಿಸ್ತರಿಸಲು ಮತ್ತು ವಿಶ್ವಾಸಾರ್ಹ ಪೂರೈಕೆ ಸರಪಳಿಗಳನ್ನು ನಿರ್ಮಿಸಲು ಉಭಯ ನಾಯಕರು ಒಪ್ಪಿಕೊಂಡರು. ಔಷಧಗಳು, ಕೃಷಿ, ಮಾಹಿತಿ ತಂತ್ರಜ್ಞಾನ, ಸ್ವಚ್ಛ ಮತ್ತು ಡಿಜಿಟಲ್ ತಂತ್ರಜ್ಞಾನ, ನವೀಕರಿಸಬಹುದಾದ ಇಂಧನ, ಅರೆವಾಹಕಗಳು ಸೇರಿದಂತೆ ಹಲವಾರು ವರ್ಧಿತ ಸಹಕಾರ ಕ್ಷೇತ್ರಗಳಲ್ಲಿ ಹಾಗೂ ಹಡಗು ನಿರ್ಮಾಣ ಮತ್ತು ಸೈಬರ್ ಭದ್ರತೆಯಲ್ಲಿ ಉಭಯ ದೇಶಗಳ ನಡುವೆ ಸಹಕಾರ ಮತ್ತಷ್ಟು ಬಲಪಡಿಸಲಾಗುವುದು ಎಂದು ಪ್ರಧಾನಿ ಮೋದಿ ಹೇಳಿದರು. ರಕ್ಷಣಾ ವಲಯದಲ್ಲಿ, ಎರಡೂ ರಾಷ್ಟ್ರಗಳು ಜಂಟಿ ತರಬೇತಿ, ಮಿಲಿಟರಿ ವಿನಿಮಯ ಮತ್ತು ರಕ್ಷಣಾ ಉದ್ಯಮ ಸಹಯೋಗವನ್ನು ಒಳಗೊಂಡ ದೀರ್ಘಾವಧಿಯ ರಕ್ಷಣಾ ಸಹಕಾರ ಯೋಜನೆಯನ್ನು ರೂಪಿಸುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು.

><><><><><><><><

ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷದಿಂದಾಗಿ ಪರಿಸ್ಥಿತಿ ಹದಗೆಡುತ್ತಿರುವುದರಿಂದ, ಇರಾನ್‌ನಿಂದ ಭಾರತೀಯ ಪ್ರಜೆಗಳನ್ನು ಸ್ಥಳಾಂತರಿಸಲು ಭಾರತವು ಆಪರೇಷನ್ ಸಿಂಧುವನ್ನು ಪ್ರಾರಂಭಿಸಿದೆ. ಮೊದಲ ಹೆಜ್ಜೆಯಾಗಿ, ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಉತ್ತರ ಇರಾನ್‌ನಿಂದ ೧೧೦ ಭಾರತೀಯ ವಿದ್ಯಾರ್ಥಿಗಳನ್ನು ಸ್ಥಳಾಂತರಿಸಿದೆ. ನಿನ್ನೆ ಅವರು ಸುರಕ್ಷಿತವಾಗಿ ಅರ್ಮೇನಿಯಾ ಗಡಿ ದಾಟಲು ಸಹಾಯ ಮಾಡಿದೆ.

ಇರಾನ್ ಮತ್ತು ಅರ್ಮೇನಿಯಾದಲ್ಲಿನ ಭಾರತೀಯ ರಾಯಭಾರ ಕಚೇರಿಗಳ ಮೇಲ್ವಿಚಾರಣೆಯಲ್ಲಿ ವಿದ್ಯಾರ್ಥಿಗಳು ಅರ್ಮೇನಿಯಾದ ರಾಜಧಾನಿ ಯೆರೆವಾನ್‌ಗೆ ರಸ್ತೆ ಮೂಲಕ ಪ್ರಯಾಣಿಸಿದರು. ಈ ವಿದ್ಯಾರ್ಥಿಗಳು ನಿನ್ನೆ ಮಧ್ಯಾಹ್ನ ವಿಶೇಷ ವಿಮಾನದಲ್ಲಿ ಯೆರೆವಾನ್‌ನಿಂದ ಹೊರಟರು ಮತ್ತು ಇಂದು ಮುಂಜಾನೆ ನವದೆಹಲಿಗೆ ಆಗಮಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಸುಗಮ ಸ್ಥಳಾಂತರಕ್ಕಾಗಿ ಭಾರತ ಸರ್ಕಾರ, ಇರಾನ್ ಮತ್ತು ಅರ್ಮೇನಿಯಾ ಸರ್ಕಾರಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದೆ ಎಂದು ಸಚಿವಾಲಯ ತಿಳಿಸಿದೆ. ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳು ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯ ತುರ್ತು ಸಹಾಯವಾಣಿಯ ಮೂಲಕ ಮತ್ತು ನವದೆಹಲಿಯಲ್ಲಿ ವಿದೇಶಾಂಗ ಸಚಿವಾಲಯ ಸ್ಥಾಪಿಸಿರುವ ದಿನದ ೨೪ ಗಂಟೆ ಕಾರ್ಯನಿರ್ವಹಿಸುತ್ತಿರುವ ನಿಯಂತ್ರಣ ಕೊಠಡಿಯೊಂದಿಗೆ ಸಂಪರ್ಕದಲ್ಲಿರಲು ಸೂಚಿಸಲಾಗಿದೆ.

><><><><><><><><><

ರಸ್ತೆ ಅಪಘಾತದ ಸಂತ್ರಸ್ತರಿಗೆ ನಗದು ರಹಿತ ಚಿಕಿತ್ಸೆಗಾಗಿ ರಾಷ್ಟ್ರವ್ಯಾಪಿ ಯೋಜನೆಯ ಅನುಷ್ಠಾನದ ಕುರಿತು ನವದೆಹಲಿಯಲ್ಲಿ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಉನ್ನತ ಮಟ್ಟದ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ, ರಸ್ತೆ ಸುರಕ್ಷತೆಯನ್ನು ಉತ್ತೇಜಿಸುವಲ್ಲಿ ಮೂಲಭೂತ ಪ್ರಯತ್ನಗಳನ್ನು ಸಚಿವರು ಶ್ಲಾಘಿಸಿದರು. ದೇಶಾದ್ಯಂತ ರಸ್ತೆ ಅಪಘಾತದಿಂದ ಉಂಟಾಗುತ್ತಿರವ ಸಾವುಗಳ ಅಪಾಯಕಾರಿ ಪ್ರಮಾಣವನ್ನು ತಡೆಯುವ ತುರ್ತು ಅಗತ್ಯವಿದೆ. ರಸ್ತೆ ಅಪಘಾತಗಳನ್ನು ತಡೆಯುವುದು ಕೇಂದ್ರ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಸಚಿವ ನಿತಿನ್ ಗಡ್ಕರಿ ಹೇಳಿದರು. ಎಲ್ಲಾ ರಾಜ್ಯಗಳಲ್ಲಿ ನಗದು ರಹಿತ ಚಿಕಿತ್ಸಾ ಯೋಜನೆಯ ಸುಗಮ ಮತ್ತು ಪ್ರಮಾಣೀಕೃತ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಪಾಲುದಾರರಲ್ಲಿ ಸಮನ್ವಯದ ಅಗತ್ಯವಿದೆ ಎಂದರು. ೨೦೨೦ ರ ಸ್ಟಾಕ್‌ಹೋಮ್ ಘೋಷಣೆಯಂತೆ, ೨೦೩೦ ರ ವೇಳೆಗೆ ರಸ್ತೆ ಅಪಘಾತದಿಂದ ಉಂಟಾಗುವ ಸಾವುಗಳನ್ನು ಶೇಕಡಾ ೫೦ ರಷ್ಟು ತಗ್ಗಿಸುವ ಭಾರತದ ಪ್ರತಿಜ್ಞೆಯನ್ನು ಸಾಧಿಸಲು ಈ ಉಪಕ್ರಮದ ಯಶಸ್ಸು ಅತ್ಯಗತ್ಯ ಎಂದು ಸಚಿವ ನಿತಿನ್ ಗಡ್ಕರಿ ಪ್ರತಿಪಾದಿಸಿದರು.

><><><><><><><><><

ದಕ್ಷಿಣ ಗಾಜಾದ ನೆರವು ವಿತರಣಾ ಸ್ಥಳದ ಬಳಿ ಇಸ್ರೇಲಿ ಮಿಲಿಟರಿ ನಡೆಸಿದ ಗುಂಡಿನ ದಾಳಿಯಲ್ಲಿ ೫೧ ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಮತ್ತು ಸುಮಾರು ೨೦೦ ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಖಾನ್ ಯೂನಿಸ್‌ನಲ್ಲಿರುವ ನೆರವು ವಿತರಣಾ ಸ್ಥಳದ ಬಳಿ ಇಸ್ರೇಲಿ ಪಡೆಗಳು ಜನಸಮೂಹದ ಮೇಲೆ ಗುಂಡು ಹಾರಿಸಿವೆ ಎಂದು ಹಮಾಸ್ ನಡೆಸುತ್ತಿರುವ ನಾಗರಿಕ ರಕ್ಷಣಾ ಸಂಸ್ಥೆ ಹೇಳಿಕೊಂಡಿದೆ. ಮಾಧ್ಯಮ ವರದಿಗಳ ಪ್ರಕಾರ, ವಾರಗಟ್ಟಲೆ ಇಸ್ರೇಲಿ ಮಿಲಿಟರಿ ಕಾರ್ಯಾಚರಣೆ ನಡೆಯುತ್ತಿರುವ ಪ್ರದೇಶವಾದ ಬನಿ ಸುಹೇಲಾ ಪಟ್ಟಣಕ್ಕೆ ಹೋಗುವ ಪ್ರಮುಖ ರಸ್ತೆಯ ಬಳಿ ಜನಸಮೂಹ ಜಮಾಯಿಸಿತ್ತು ಎಂದು ಹೇಳಲಾಗಿದೆ. ಘಟನೆಯ ಬಗ್ಗೆ ಇಸ್ರೇಲಿ ಮಿಲಿಟರಿಯಿಂದ ತಕ್ಷಣದ ಯಾವುದೇ ಪ್ರತಿಕ್ರಿಯೆ ವರದಿಯಾಗಿಲ್ಲ.

><><><><><><><><><

ಇಸ್ರೇಲ್-ಇರಾನ್ ಸಂಘರ್ಷದ ಮಧ್ಯೆ ಉದ್ವಿಗ್ನತೆ ನಿವಾರಣೆ ಮತ್ತು ರಾಜತಾಂತ್ರಿಕತೆಯ ಅಗತ್ಯವನ್ನು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಮತ್ತು ಕತಾರಿ ಎಮಿರ್ ಶೇಖ್ ತಮೀಮ್ ಬಿನ್ ಹಮದ್ ಅಲ್ ಥಾನಿ ಒತ್ತಿ ಹೇಳಿದ್ದಾರೆ. ಬ್ರಿಟನ್ ಪ್ರಧಾನಿ ಕಚೇರಿ ಬಿಡುಗಡೆ ಮಾಡಿದ ಹೇಳಿಕೆಯ ಪ್ರಕಾರ, ಕತಾರಿ ಎಮಿರ್ ಜೊತೆಗಿನ ದೂರವಾಣಿ ಸಂಭಾಷಣೆಯ ಸಮಯದಲ್ಲಿ, ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್, ಕತಾರ್‌ಗೆ ಬ್ರಿಟನ್ ಬೆಂಬಲವನ್ನು ಪುನರುಚ್ಚರಿಸಿದರು. ಪ್ರಾದೇಶಿಕ ಸ್ಥಿರತೆಯನ್ನು ಎರಡೂ ದೇಶಗಳು ಹೇಗೆ ಮತ್ತಷ್ಟು ಬೆಂಬಲಿಸಬಹುದು ಎಂಬುದನ್ನು ಉಭಯ ನಾಯಕರು ಚರ್ಚಿಸಿದರು. ಗಾಜಾದಲ್ಲಿನ ಅಸಹನೀಯ ಪರಿಸ್ಥಿತಿಯ ಬಗ್ಗೆ ಕತಾರಿ ಎಮಿರ್ ಜೊತೆ ಸ್ಟಾರ್ಮರ್ ಮಾತನಾಡಿದರು ಮತ್ತು ಕದನ ವಿರಾಮಕ್ಕೆ ಬ್ರಿಟನ್‌ನ ಬೆಂಬಲವನ್ನು ಸೂಚಿಸಿದರು.

><><><><><><><><><

ಇದೇ ೨೧ ರಂದು ಪ್ರಪಂಚದಾದ್ಯಂತ ೧೧ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುವುದು. ಪ್ರಾಚೀನ ಭಾರತೀಯ ಸಂಪ್ರದಾಯದಿಂದ ಜಾಗತಿಕ ಆಂದೋಲನಕ್ಕೆ ಯೋಗದ ವಿಕಸನದ ಕುರಿತು ಆಕಾಶವಾಣಿ ನ್ಯೂಸ್ ವಿಶೇಷ ಸಂಚಿಕೆ ಪ್ರಸಾರ ಮಾಡುತ್ತಿದೆ. ಯೋಗದ ಇತಿಹಾಸವು ಭಾರತದ ಪ್ರಾಚೀನ ನಾಗರಿಕತೆಯಲ್ಲಿ ಆಳವಾಗಿ ಬೇರೂರಿದೆ.

ಇದು ಆರಂಭಿಕ ಸಿಂಧೂ-ಸರಸ್ವತಿ ಕಣಿವೆ ಸಂಸ್ಕೃತಿಯಲ್ಲಿ ಆಧ್ಯಾತ್ಮಿಕ ಅಭ್ಯಾಸವಾಗಿ ಪ್ರಾರಂಭವಾಯಿತು ಮತ್ತು ಕ್ರಮೇಣ ಸ್ವಯಂ-ಸಾಕ್ಷಾತ್ಕಾರದ ಕಡೆಗೆ ಶಿಸ್ತಿನ ಮಾರ್ಗವಾಗಿ ವಿಕಸನಗೊಂಡಿತು. ಅನೇಕ ವರ್ಷಗಳವರೆಗೆ, ವಿದ್ವಾಂಸರು ಯೋಗವು ಕ್ರಿಸ್ತ ಪೂರ್ವ ೫೦೦ ರ ಸುಮಾರಿಗೆ ಬೌದ್ಧಧರ್ಮದ ಉದಯದ ಸಮಯದಲ್ಲಿ ಹುಟ್ಟಿಕೊಂಡಿತು ಎಂದು ನಂಬಿದ್ದರು. ಆದಾಗ್ಯೂ, ಸಿಂಧೂ-ಸರಸ್ವತಿ ಕಣಿವೆ ನಾಗರಿಕತೆಯ ಪುರಾತತ್ತ್ವ ಶಾಸ್ತ್ರದ ಸಂಶೋಧನೆಗಳು ಯೋಗವು ಹೆಚ್ಚು ಹಳೆಯದು ಎಂದು ಸೂಚಿಸುತ್ತವೆ. ಕಾಲಾನಂತರದಲ್ಲಿ, ಈ ಅಭ್ಯಾಸವು ಶ್ರೀಮಂತ ಶಿಸ್ತಾಗಿ ಅರಳಿತು. ಇದು ವೇದಗಳು, ಉಪನಿಷತ್ತುಗಳು ಮತ್ತು ನಂತರ ಪತಂಜಲಿಯ ಯೋಗ ಸೂತ್ರಗಳಲ್ಲಿ ಸೇರಿಕೊಂಡಿತು. ಮಹಾಭಾರತದ ಯೋಗದ ಆಳವಾದ ಉಲ್ಲೇಖಗಳಿಂದ ಹಿಡಿದು ಸ್ವಾಮಿ ವಿವೇಕಾನಂದ ಮತ್ತು ಬಿ.ಕೆ.ಎಸ್.ಐಯ್ಯಂಗಾರ್ ಅವರಂತಹ ಮಹಾನ್ ಗುರುಗಳ ೧೯ ಮತ್ತು ೨೦ನೇ ಶತಮಾನದ ಪುನರುಜ್ಜೀವನದವರೆಗೆ, ಪ್ರಾಚೀನ ಸಂಪ್ರದಾಯದಿಂದ ಸಾರ್ವತ್ರಿಕ ಶಿಸ್ತಾಗಿ ರೂಪಾಂತರಗೊಂಡಿದೆ. ೨೦೧೪ ರಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತಾ, ಜೂನ್ ೨೧ ಅನ್ನು ಅಂತಾರಾಷ್ಟ್ರೀಯ ಯೋಗ ದಿನವೆಂದು ಪ್ರಸ್ತಾಪಿಸಿದರು. ಈ ಪ್ರಸ್ತಾಪವನ್ನು ಅಗಾಧ ಬೆಂಬಲದೊಂದಿಗೆ ಅಂಗೀಕರಿಸಲಾಯಿತು. ಅಂದಿನಿಂದ, ಜೂನ್ ೨೧ ಅನ್ನು ಪ್ರಪಂಚದಾದ್ಯಂತ ಅಂತಾರಾಷ್ಟ್ರೀಯ ಯೋಗ ದಿನವೆಂದು ಆಚರಿಸಲಾಗುತ್ತಿದೆ. ಇದೇ ಶನಿವಾರ ೧೧ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸುತ್ತಿದ್ದು, 'ಯೋಗ ಫಾರ್ ಒನ್ ಅರ್ಥ್, ಒನ್ ಹೆಲ್ತ್' ಎಂಬುದು ಈ ವರ್ಷದ ಘೋಷವಾಕ್ಯವಾಗಿದೆ. ಇದು ಏಕತೆ ಮತ್ತು ಯೋಗಕ್ಷೇಮದ ಸಂದೇಶವನ್ನು ನೀಡುತ್ತದೆ. ಧರ್ಮ, ಜನಾಂಗ ಅಥವಾ ರಾಷ್ಟ್ರೀಯತೆ ಯಾವುದೇ ಇರಲಿ, ಯೋಗವು ಆರೋಗ್ಯಕರ, ಹೆಚ್ಚು ಸಮತೋಲಿತ ಮತ್ತು ಅರ್ಥಪೂರ್ಣ ಜೀವನಕ್ಕೆ ಮಾರ್ಗವನ್ನು ತೋರುತ್ತದೆ.

><><><><><><><><

೨೦೨೫ ರ ಹಾಕಿ ಇಂಡಿಯಾ ಮಾಸ್ಟರ್ಸ್ ಕಪ್ ಪಂದ್ಯಾವಳಿಗೆ ಚೆನ್ನೈನಲ್ಲಿ ನಿನ್ನೆ ಚಾಲನೆ ದೊರೆಯಿತು.

ಮಹಿಳಾ ವಿಭಾಗದಲ್ಲಿ, ಹಾಕಿ ಕರ್ನಾಟಕ ತಂಡವು ಕೇರಳ ಹಾಕಿ ತಂಡವನ್ನು ೭-೦ ಗೋಲುಗಳಿಂದ ಸೋಲಿಸಿತು. ಇದೇ ವೇಳೆ ಹಾಕಿ ಮಹಾರಾಷ್ಟ್ರ ತಂಡದ ಎದುರು ೫-೦ ಗೋಲುಗಳಿಂದ ಹಾಕಿ ಹಿಮಾಚಲ ತಂಡವು ಪರಭಾವಗೊಂಡಿತು. ಪುರುಷರ ವಿಭಾಗದಲ್ಲಿ, ಹಾಕಿ ಪಂಜಾಬ್ ತಂಡವು ಪುದುಚೇರಿ ಹಾಕಿ ತಂಡವನ್ನು ೩-೨ ಗೋಲುಗಳಿಂದ ಸೋಲಿಸಿತು. ತಮಿಳುನಾಡು ಹಾಕಿ ತಂಡವು, ಕೇರಳ ಹಾಕಿ ತಂಡದ ವಿರುದ್ಧ ೮-೦ ಗೋಲುಗಳಿಂದ ಭರ್ಜರಿ ಜಯ ದಾಖಲಿಸಿತು. ಕರ್ನಾಟಕ, ಒಡಿಶಾ, ಹರಿಯಾಣ, ಹಿಮಾಚಲ ಪ್ರದೇಶ, ಮಹಾರಾಷ್ಟ್ರ, ಪಂಜಾಬ್, ತಮಿಳುನಾಡು ಮತ್ತು ಕೇರಳ ಸೇರಿದಂತೆ ಮಹಿಳಾ ವಿಭಾಗದಲ್ಲಿ ಎಂಟು ತಂಡಗಳು ಪ್ರಶಸ್ತಿಗಾಗಿ ಸ್ಪರ್ಧಿಸುತ್ತಿವೆ. ಪುರುಷರ ವಿಭಾಗದಲ್ಲಿ ೧೧ ತಂಡಗಳಿದ್ದು, ಈ ತಿಂಗಳ ೨೭ ರಂದು ಅಂತಿಮ ಪಂದ್ಯ ನಡೆಯಲಿದೆ.

><><><><><><><><><